4

# ಅಪರಾಧ ಮನೋಭಾವದ ಮೇಲೆ ಜಯ

ಅಪಜಯ ಹೊಂದಲು ಹುಟ್ಟಿದವನು ಎಂಬ ಕಥೆಯನ್ನು ಓದಿರುವೆನು. "ಅಪಜಯ ಹೊಂದಲು ಹುಟ್ಟಿದವನು" ಎಂಬ ಸ್ವಭಾವವು ನನಗೂ ಅನ್ವಹಿಸುತ್ತದೆ. ಕಾರ್ಯಗಳು ಯಶಸ್ವಿಯಾಗದಿರುವಾಗ, ಸಮಸ್ಯೆಗಳು ಉದ್ಭವಿಸುತ್ತವೆ. ಆಗ "ನಾನು ನಿಜವಾಗಿಯೂ ಜಯ ಹೊಂದಬಹುದೇ?" ಎಂದು ಆಲೋಚಿಸುತ್ತೇನೆ.

ನನ್ನ ಹಾಗೆ ಸೋತು ಹೋದವರಿಗೆ, ಜಯವು ಸಾಧ್ಯ ಎಂಬ ಶುಭ ಸುದ್ದಿಯನ್ನು ನಾನು ನೀಡುತ್ತೇನೆ. "ನಾವು ಕ್ರಿಸ್ತನಲ್ಲಿ ಪೂರ್ಣ ಜಯಶಾಲಿಗಳು" (ರೋಮಾಪುರ 8:37; RSV). ಎಂದು ಪೌಲನು 5:4, 5ರಲ್ಲಿ ತಿಳಿಸಿರುವನು,

> ದೇವರಿಂದ ಹುಟ್ಟಿರುವಂಥದೆಲ್ಲವು ಲೋಕವನ್ನು ಜಯಿಸುತ್ತದೆ. ಲೋಕವನ್ನು ಜಯಿಸಿದಂಥದು ನಮ್ಮ ನಂಬಿಕೆಯೇ.
>
> ಯೇಸುವು ದೇವರ ಮಗನೆಂದು ನಂಬಿದವರೇ ಅಲ್ಲದೆ ಲೋಕವನ್ನು ಜಯಿಸುವವರು ಇನ್ನಾರಿದ್ದಾರೆ?

ಪಾಪದ ಲೋಕವನ್ನು ನಾವುಗಳು ಜಯಿಸಬಹುದಾಗಿದೆ. ಕ್ರೈಸ್ತರು "ಪಾಪದ ಮೇಲೆ ಜಯವನ್ನು ಹೊಂದಬಹುದು"! 1 ಯೋಹಾನ 2:15-17 ಎಂಬ ಮುಖ್ಯ "ಪ್ರಸ್ತಾಪವನ್ನು" ಯೋಹಾನನು ತಿಳಿಸಿರುವನು.

ಕ್ರಿಸ್ತನ ಮುಖಾಂತರ ಅಪರಾಧ ಮನೋಭಾವವೆಂಬ ಪಾಪವನ್ನು ಜಯಿಸಬಹುದಾಗಿದೆ. ನಾವು ಪಾಪ ಮಾಡಿದಾಗ, ದೇವರಿಗೆ ಬೇಸರ ತರುತ್ತವೆ ಎಂದು ಸತ್ಯವೇದ ತಿಳಿಸುತ್ತದೆ. ನಮ್ಮ ಪಾಪಗಳೇ ನಮ್ಮನ್ನು ದೇವರಿಂದ ಪ್ರತ್ಯೇಕ ಮಾಡುತ್ತವೆ (ಯೆಶಾಯ 59:1, 2; ಎಫೆಸ 2:12). ಯೇಸುವಿನ ತ್ಯಾಗದಲ್ಲಿ ನಮ್ಮ ಪಾಪಗಳು ಕ್ಷಮಿಸಲ್ಪಟ್ಟಿವೆ. ಕ್ರೈಸ್ತರು ಪಾಪ ಮಾಡುವಾಗ, ಅವರ ಪಾಪಗಳು ಕ್ಷಮಿಸಲ್ಪಡುತ್ತವೆ.

## ಹಿಂದೆ ಮಾಡಿದ ಪಾಪಗಳ, ಅಪರಾಧ ಮನೋಭಾವನೆ

1 ಯೋಹಾನ 3:5 ಪಾಪ ನಿವಾರಣೆಗಾಗಿ ಆತನು ಕಾಣಿಸಿಕೊಂಡನು. ಯೋಹಾನ 3:16ರಲ್ಲಿ, "ಆತನು ತನ್ನ ಜೀವವನ್ನು ಸಮರ್ಪಿಸಿದನು. ನಾವು ಆತನ ಮೂಲಕ ಜೀವಿಸ ಬೇಕೆಂದು ಆತನು ಬಂದನು" (1 ಯೋಹಾನ 4:9, 10, 14). "ಆತನು ಲೋಕದ ರಕ್ಷಕನು" (1 ಯೋಹಾನ 2:2). "ಸಂದೇಹವಿಲ್ಲದೆ ನಮ್ಮ ಪಾಪಗಳನ್ನು ಕ್ಷಮಿಸಿರುವನು" (1 ಯೋಹಾನ 2:12).

ನಾವು ದೇವರ ಮಕ್ಕಳಾಗುವಾಗ, ಆತನ ಕೃಪೆ ಹಾಗೂ ನಂಬಿಕೆಯಿಂದ ಕ್ಷಮಿಸಲ್ಪಟ್ಟಿದ್ದೇವೆ (1 ಯೋಹಾನ 5:1). ಪಾಪಕ್ಷಮೆಗೆ, ನಂಬಿಕೆ ಪ್ರಮುಖವಾಗಿರುತ್ತದೆ. "ಲೋಕವನ್ನು ಜಯಿಸುವದು ನಮ್ಮ ನಂಬಿಕೆಯೇ" (ನೋಡಿರಿ 1 ಯೋಹಾನ 5:5ಎ).

ಯೇಸುವಿನ ದೈವತ್ವದ ತತ್ವವನ್ನು ಒಬ್ಬನು ನಂಬುವದರಿಂದ, ಅವನಿಗೆ ರಕ್ಷಣೆ ಯಾಗುವದಿಲ್ಲ, ಆದರೆ ಒಬ್ಬ ಪಾಪಿಯು ಯೇಸುವನ್ನು ನಂಬಿ, ತನ್ನ ಪಾಪಕ್ಕೆ ಮಾನಸಾಂತರ ಪಟ್ಟು, ದೀಕ್ಷಾಸ್ನಾನ ಹೊಂದುವಾಗ ರಕ್ಷಿಸಲ್ಪಡುತ್ತಾನೆ (ಅಪೊಸ್ತಲರ ಕೃತ್ಯಗಳು 2:38). ಅನಂತರವೇ ಅವನು ತನ್ನ ಪಾಪ ಅಪರಾಧದ ಮೇಲೆ ಜೀವವನ್ನು ಅನುಭವಿಸುತ್ತಾನೆ.

## ಪ್ರಚಲಿತವಾದ ಪಾಪ ಪ್ರಜ್ಞೆ

ಹಳೆಯ ಪಾಪ ಪ್ರಜ್ಞೆಯ ಮೇಲೆ ಜಯವನ್ನು ನೀಡುವದರ ಸಂಗಡ, ಪ್ರಚಲಿತ ವಾಗಿಯೂ ಜಯವನ್ನು ನೀಡುತ್ತಾನೆ. ನಾವು ಪಾಪಮಾಡಿದಾಗ, ನೀತಿವಂತನಾದ ಯೇಸು ತಂದೆಯ ಬಳಿಯಲ್ಲಿ ಸಂಧಾನ ಮಾಡುತ್ತಿರುತ್ತಾನೆ (1 ಯೋಹಾನ 2:1). ನಾವು ಆತನಂತೆ ಬೆಳಕಿನಲ್ಲಿ ನಡೆಯುವದಾದರೆ, ಆತನ ಮಗನ ರಕ್ತವು ನಮ್ಮನ್ನು ಸಕಲ ಅನೀತಿಯಿಂದ ಶುದ್ಧಮಾಡುತ್ತದೆ (1 ಯೋಹನ 1:7). ಹಾಗೆಯೇ, ನಾವು "ನಮ್ಮ ಪಾಪಗಳನ್ನು ಒಪ್ಪಿಕೊಂಡು ಅರಿಕೆ ಮಾಡಿದರೆ ಆತನು ನಂಬಿಗಸ್ತನೂ ನೀತಿವಂತನೂ ಆಗಿರುವದಿಂದ ನಮ್ಮ ಪಾಪಗಳನ್ನು ಕ್ಷಮಿಸಿಬಿಟ್ಟು ಸಕಲ ಅನೀತಿಯನ್ನು ಪರಿಹರಿಸಿ ನಮ್ಮನ್ನು ಶುದ್ಧಿಮಾಡುವನು" (1 ಯೋಹಾನ 1:9).

ಯೇಸು ತನ್ನ ರಕ್ತದ ಮುಖಾಂತರ ನಮ್ಮ ಪಾಪಗಳನ್ನು ಕ್ಷಮಿಸುವನು ಎಂದು ಕ್ರೈಸ್ತರಾದ ನಾವುಗಳು ತಿಳಿಯಬೇಕು. ಪಾಪಗಳನ್ನು ಅರಿಕೆ ಮಾಡಿದ ನಂತರವೂ, ಪಾಪ ಪ್ರಜ್ಞೆವುಳ್ಳವರಾಗಿದ್ದರೆ, ದೇವರ ಮಾತುಗಳ ಮೇಲೆ ಅಪನಂಬಿಕೆ ಪಡುವವರಾಗುತ್ತೇವೆ. ಕ್ರೈಸ್ತರಿಗೆ ಅಪರಾಧ ಮನೋಭಾವನೆಯಿಂದ ಜಯವು ಯಾವಾಗಲೂ ಲಭಿಸುತ್ತಾ ಮುಂದುವರಿಯುತ್ತದೆ.

## ಮುಕ್ತಾಯ

ಪಾಪದ ಮೇಲೆ ಜಯಸಾಧಿಸುವ ಮಾರ್ಗವನ್ನು ಯೇಸು ನೀಡಿರುವನು. ಈ ಮಾರ್ಗಕ್ಕಾಗಿ ತನ್ನ ರಕ್ತವನ್ನೇ ತ್ಯಾಗ ಮಾಡಿದ್ದಾನೆ. ಆತನ ಬೆಳಕಿನಲ್ಲಿ ನಡೆಯುವವರು, ಆತನ ಸುವಾರ್ತೆಗೆ ಒಳಗಾಗುವವರು ಮಹಾ ರಕ್ಷಣೆ ಹೊಂದುವರು.